ದಿನಾಂಕಃ 28.06.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ನಾನು ಈ ಹಿಂದೆ ನನ್ನ ಪತ್ನಿಯ ಜಿಪಿಎ ಹೋಲ್ಡರ್ ಆಗಿ ಹೆಚ್.ಟಿ. ಮಂಜುನಾಥ್ ರವರ ವಿರುದ್ಧ ದಾವ ಸಲ್ಲಿಸಿದ್ದೆ ಎಂದರೆ ಸರಿ. ಆ ದಾವಾದ ದಾವ ಆಸ್ತಿಗೆ ಚೆಕ್ಕುಬಂದಿಯನ್ನು ನಾನೇ ಹೇಳಿ ನಮೂದು ಮಾಡಿಸಿರುತ್ತೇನೆ. ಪ್ರಸ್ತುತ ದಾವೆಯಲ್ಲಿನ ದಾವಾ ಆಸ್ತಿ ಮತ್ತು ಮಂಜುನಾಥ್ ರವರ ವಿರುದ್ಧ ಸಲ್ಲಿಸಿದ್ದ ದಾವೆಯಲ್ಲಿನ ದಾವಾ ಆಸ್ತಿ ಎರಡು ಒಂದೇ ಎಂದರೆ ಸರಿ. ಆ ದಾವೆಯಲ್ಲಿನ ಚೆಕ್ಕುಬಂದಿಗೂ ಈ ದಾವೆಯಲ್ಲಿ ನೀಡಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಹಿಂದೆ ಸಲ್ಲಿಸಿದ ದಾವೆಯಲ್ಲಿ ತಪ್ಪಾಗಿ ನಮೂದು ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಈ ವಿಚಾರವನ್ನು ಪ್ರಸ್ತುತ ದಾವೆಯಲ್ಲಿ ಪ್ರಸ್ತಾಪಿಸಿಲ್ಲ. ನನಗೆ ಚೆಕ್ಕುಬಂದಿ ತಪ್ಪಾಗಿದೆ ಎಂದು ಗೊತ್ತಿಲ್ಲದ ಕಾರಣ ಮೂಲ ಮಾಲೀಕರಿಂದ ಆ ಬಗ್ಗೆ ತಿದ್ದು ಪಡಿ ಮಾಡಿಸಿಕೊಂಡಿಲ್ಲ ಆದರೆ ಈ ಮುಂದೆ ಮಾಡಿಸಿಕೊಳ್ಳುತ್ತೇನೆ.

ದಾವಾ ಆಸ್ತಿಯನ್ನು ಮೂಲ ಮಾಲೀಕರಿಂದ ನಾನೇ ಖರೀದಿ ಮಾಡಿದ್ದೆ ಎಂದರೆ ಸರಿ. ಆನಂತರ ನಾನೇ ದಾವಾ ಸ್ವತ್ತನ್ನು ನನ್ನ ಪತ್ನಿಗೆ ನಿಪಿ-2 ರಂತೆ ದಾನ ನೀಡಿದ್ದೇನೆ ಎಂದರೆ ಸರಿ. ನಿಪಿ-2 ರ ದಾನಪತ್ರದಲ್ಲಿಯೂ ಸಹಾ ಮೂಲ ಕ್ರಯಪತ್ರದಲ್ಲಿ ನಮೂದಿಸಲಾದ ಕ್ರಯಪತ್ರವನ್ನೇ ನಮೂದಿಸಲಾಗಿದೆ ಎಂದರೆ ಸರಿ. ನಿಪಿ-1 ರ ಅಧಿಕಾರ ಪತ್ರದಲ್ಲಿಯೂ ಸಹಾ ದಾನಪತ್ರದಲ್ಲಿ ನಮೂದಿಸಲಾದ ಚೆಕ್ಕುಬಂದಿಯನ್ನೇ ನಮೂದು ಮಾಡಲಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಸರ್ಕಾರಿ ರಸ್ತೆ ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಹೆಚ್.ಟಿ. ಮಂಜುನಾಥ್ ರವರ ವಿರುದ್ಧ ದಾಖಲಿಸಿದ ದಾವೆಯಲ್ಲಿ ದಾವ ಆಸ್ತಿಯ ದಕ್ಷಿಣ ದಿಕ್ಕಿಗೆ ರಸ್ತೆ ಕಾಣಿಸಿದ್ದೆ ಎಂದರೆ ನನಗೆ ನೆನಪಿಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ರಸ್ತೆ ಮಾಡುತ್ತಿದ್ದಾರೆ ಎಂದು ಹೆಚ್.ಟಿ. ಮಂಜುನಾಥ್ ರವರ ವಿರುದ್ಧ ದಾವಾ ದಾಖಲಿಸಿದ್ದೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಆ ದಾವ ಸಲ್ಲಿಸುವಾಗ ಸರಿಯಾದ ಚೆಕ್ಕುಬಂದಿ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ-6 ರಂತೆ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಇರುವ ರಸ್ತೆ ದಾವಾ ಸ್ವತ್ತಿನಲ್ಲಿಯೇ ಇದೆ ಎಂದರೆ ಸರಿ. ಸಾಕ್ಷಿಯು ರಸ್ತೆಯನ್ನು ಬಿಟ್ಟು ಬೇಲಿ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೈಕಿ 1 ಎಕರೆ 13 ಗುಂಟೆ 'ಎ' ಕರಾಬು ಮತ್ತು 15 ಗುಂಟೆ 'ಬ' ಕರಾಬು ಎಂದರೆ ಸರಿ. ಸದರಿ 1 ಎಕರೆ 13 ಗುಂಟೆ ಕರಾಬು ಧರೆ ಮತ್ತು ಕೊರಕಲು ಸಂಬಂಧ ಮೀಸಲಾಗಿದೆ ಎಂದರೆ ಸರಿ. ದಾವ ಸ್ವತ್ತಿನ ಪೈಕಿ 8 ಗುಂಟೆ ಜಮೀನನ್ನು ಭೂಪರಿವರ್ತನೆ ಮಾಡಿಸಿ ಅಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಎಂದು ವಾದಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಭೂಪರಿವರ್ತನೆಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಭೂಪರಿವರ್ತನೆ ಮಾಡಿಸಿದ ಜಾಗದ ಸ್ಕೆಚ್ ಮಾಡಲಾಗುತ್ತದೆ ಎಂದರೆ ಸರಿ. ಸಾಕ್ಷಿಯು ತಾವು

ಮನೆ ಕಟ್ಟಿರುವ ಜಾಗದ ತತ್ಕಾಲ್ ಪೋಡಿ ಆಗಿದ್ದು ನಕ್ಷೆ ನೀಡಲು ಅಧಿಕಾರಿಗಳು ಕಾಲವಕಾಶ ಕೋರಿದ್ದಾರೆ. ಭೂಪರಿವರ್ತನೆಯಾದ ಸ್ವತ್ತಿನ ಸಂಬಂಧ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ದಾಖಲಾಗುತ್ತದೆ ಎಂದರೆ ಸರಿ. ಸದರಿ ಖಾತಾ ಸಂಬಂಧದ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ನಾನು ಅಲಿನೇಷನ್ ನಕಾಶೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ದಾವಾ ಸ್ವತ್ತಿನ ಪೈಕಿ 19 ಗುಂಟೆ ಜಾಗ ಒತ್ತುವರಿಯಾಗಿದೆ ಎಂದು ಹೇಳಿ ನಾನು ಒಟ್ಟು ವಿಸ್ತೀರ್ಣದ ಸ್ವತ್ತಿಗೆ ದಾವ ಸಲ್ಲಿಸಿದ್ದೇನೆ ಎಂದರೆ ಸರಿ. ಒಟ್ಟು ಆಸ್ತಿಯ ಉತ್ತರ ದಿಕ್ಕಿನಲ್ಲಿ ಒತ್ತುವರಿಯಾಗಿದೆ. ನಾನು 6 ಗುಂಟೆ ಜಮೀನನ್ನು ಲೀಜ್ ನೀಡಿದ್ದೇನೆ ಎಂದು ಹೇಳಿರುವ ಜಾಗ ಒಟ್ಟು ಜಮೀನಿನ ಉತ್ತರ ದಿಕ್ಕಿಗೆ ಇದೆ. ಲೀಜ್ ಅಗ್ರಿಮೆಂಟ್ ನಲ್ಲಿ 6 ಗುಂಟೆ ಜಮೀನಿಗೆ ಯಾವ ಚೆಕ್ಕುಬಂದಿ ನೀಡಲಾಗಿದೆ ಎಂದು ನೆನಪಿಲ್ಲ. ಸದರಿ ಕರಾರನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಭೂಪರಿವರ್ತನೆಯಾಗಿರುವ 8 ಗುಂಟೆ ಜಮೀನು ಒಟ್ಟು ವಿಸ್ತೀರ್ಣದ ಉತ್ತರ ದಿಕ್ಕಿಗೆ ಇದೆ. ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಯಾದ ಜಾಗ ಕೃಷಿ ಜಮೀನು ಎಂಬ ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂದರೆ ಸರಿ. ಭೂಪರಿವರ್ತನೆ ಮಾಡಿಸಿಕೊಳ್ಳುವಾಗ ತಾಲ್ಲೂಕು ಕಚೇರಿಯಿಂದ ವಿನ್ಯಾಸ ನಕ್ಷೆ ಪಡೆದುಕೊಳ್ಳಬೇಕು ಎಂದರೆ ಸರಿ. ರಸ್ತೆಗೆ ಜಾಗವನ್ನು ಮೀಸಲಿರಿಸಿ ವಿನ್ಯಾಸ ನಕ್ಷೆ ನೀಡಲಾಗುತ್ತದೆ ಎಂದರೆ ಸರಿ. ನಾನು ಪಡೆದುಕೊಂಡಿರುವ ವಿನ್ಯಾಸ ನಕ್ಷೆಯಲ್ಲಿ ಯಾವ ದಿಕ್ಕಿಗೆ ರಸ್ತೆ ತೋರಿಸಿದ್ದಾರೆ ಎಂದು ನನಗೆ ನೆನಪಿಲ್ಲ.

ವಿನ್ಯಾಸ ನಕ್ಷೆಯಂತೆ ಭೂಪರಿವರ್ತನೆಯಾದ ಜಮೀನು ವಾದಿಯ ಹೆಸರಿಗೆ ಪ್ರತಿವಾದಿಯ ಗ್ರಾಮಪಂಚಾಯಿತಿಯಲ್ಲಿ ಖಾತಾ ದಾಖಲಾಗಿದೆ ಎಂದರೆ ಸರಿ. ಆ ಖಾತೆ ಪೂರ 8 ಗುಂಟೆ ಜಮೀನಿಗೆ ಆಗಿದೆ. ನಾನು ಪ್ರತಿವಾದಿ ಪಂಚಾಯಿತಿಯಿಂದ ದಾಖಲೆಗಳನ್ನು ಪಡೆದು ಹಾಜರುಪಡಿಸಲು ಸಮಯ ಬೇಕಾಗಿದೆ. ಭೂಪರಿವರ್ತನೆಯಾದ ವಿಸ್ತೀರ್ಣವನ್ನು ಬಿಟ್ಟು ಉಳಿದ ಎಷ್ಟು ವಿಸ್ತೀರ್ಣದ ಜಮೀನು ವಾದಿ ಹೆಸರಿಗೆ ಇದೆ ಎಂದರೆ ನನಗೆ ನೆನಪಿಲ್ಲ. ಮಂಜುನಾಥ್ ರವರ ವಿರುದ್ದ ಸಲ್ಲಿಸಿದ್ದ ದಾವೆಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿದ್ದೆ ಎಂದರೆ ಸರಿ. ಆ ಅರ್ಜಿ ವಜಾ ಆಗಿದೆ ಎಂದರೆ ಸರಿ. ಆ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿಯು ಹೊಸದಾಗಿ ದಾವ ಸಲ್ಲಿಸಲು ಆ ದಾವೆಯನ್ನು ವಾಪಸ್ಸು ಪಡೆದಿದ್ದೇವೆ ಎಂದು ನುಡಿಯುತ್ತಾರೆ. ಆ ದಾವ ಬಾಕಿ ಇರುವಾಗ, ದಾವಾ ಆಸ್ತಿಯಲ್ಲಿ ಇರುವ ರಸ್ತೆಗೆ ಸಂಬಂಧಿಸಿದಂತೆ ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಬಂದು ನಕ್ಷೆ ಮತ್ತು ವರದಿ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿನ ಪ್ರತಿವಾದಿ ಕಂದಾಯ ಅಧಿಕಾರಿಗಳ ವರದಿ ಮತ್ತು ನಕ್ಷೆಯನ್ನು ಸಲ್ಲಿಸಿದ ಕಾರಣ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಅರ್ಜಿ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

'ಆ' ಕರಾಬು ಜಮೀನಿನಲ್ಲಿ ಕೃಷಿ ಮಾಡಿದ್ದರೆ ಕರಾಬು ಕಳೆದು ಹೈನು ಜಮೀನಿಗೆ ವಿಸ್ತೀರ್ಣ ಸೇರಿಸುತ್ತಾರೆ ಎಂದರೆ ಸರಿ. ನಿಪಿ-3 ರಲ್ಲಿ ಇಂದಿಗೂ ಸಹಾ ದಾವ ಜಮೀನಿನ ಪೈಕಿ 1 ಎಕರೆ 13 ಗುಂಟೆ

ಜಮೀನು 'ಆ' ಕರಾಬು ಎಂದು ಇದೆ ಎಂದರೆ ಸಾಕ್ಷಿಯು ಅರ್ಜಿ ಕೊಟ್ಟಿದ್ದು ಅದು ಬಾಕಿ ಇದೆ ಎಂದು ನುಡಿಯುತ್ತಾರೆ. ಭೂಪರಿವರ್ತನೆಯಾದ 8 ಗುಂಟೆ ಜಮೀನನ್ನು ಕೃಷಿ ಜಮೀನಿನಿಂದಲೇ ಪರಿವರ್ತನೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.